# 2021-22ನೇ ಸಾಲಿನ ಸೇತುಬಂಧ ಕಾರ್ಯಕ್ರಮ

## 30 ದಿನಗಳ ಬಂಧ-ಸಾಮರ್ಥ್ಯಗಳ ಜೋಡಣೆ ಕಾರ್ಯಕ್ರಮ:- 9ನೇ ತರಗತಿ ವಿಷಯ:ಸಮಾಜ ವಿಜ್ಞಾನ

| ಅಪೇಕ್ಷಿತ ಕಲಿಕಾ ಫಲಗಳು | ಕಲಿಕಾಂಶಗಳು | ಸಲಹಾತ್ಮಕ ಚಟುವಟಿಕೆಗಳು | ಚಟುವಟಿಕೆಗಳ ನಿರ್ವಹಣೆಗಾಗಿ ಸೂಚನೆಗಳು |
|---|---|---|---|
| 1.ವಿಜಯನಗರ ಅರಸರ ಸಾಧನೆಗಳು ಮತ್ತು ಕೊಡುಗೆಗಳನ್ನು ಪ್ರಶಂಸಿಸುತ್ತಾರೆ. ( 7ನೇ ತರಗತಿಯ ಕಲಿಕಾ ಫಲ-01) | **1.** ವಿಜಯನಗರವನ್ನು ಆಳಿದ ರಾಜವಂಶಗಳು.<br>**2.** ಪ್ರಮುಖ ಅರಸರು ಮತ್ತು ಅವರ ಕೊಡುಗೆಗಳು<br>**3.** ಸಾಂಸ್ಕೃತಿಕ ಕೊಡುಗೆಗಳು | 1.1 ಟ್ರೆಶರ್ ಹಂಟ್ ಚಟುವಟಿಕೆ.<br>1.2 ಚಿತ್ರ ಸಂಗ್ರಹಣೆ.(ಕಲೆ &ವಾಸ್ತುಶಿಲ್ಪಕ್ಕೆ ಸಂಬಂಧಿಸಿದಂತೆ)<br>1.3 ಹಂಪಿಯ ವೈಭವ ಕಥನ<br>1.4 ಅಣಕು ವ್ಯಾಪಾರ<br>1.5 ಪಟ್ಟಿ ತಯಾರಿಕೆ<br>1.6 “ಶ್ರೀಕೃಷ್ಣದೇವರಾಯ “ ರಾಜಕುಮಾರ ಅಭಿನಯದ ಕನ್ನಡ ಚಲನಚಿತ್ರವನ್ನು ವೀಕ್ಷಿಸಿ. ವೆಬ್ ಲಿಂಕ್ https://youtu.be/sOGnX1u1ZGU<br>1.7 ವಂಶವೃಕ್ಷ ರಚನೆ<br>**1.8** ಕಲಿಕಾ ನಿಲ್ದಾಣ.<br>**1.9** ರಕ್ಕಸತಂಗಡಿ ನಾಟಕ ಪ್ರದರ್ಶನ | 1.1 ವಿಜಯನಗರವನ್ನು ಆಳಿದ ಅರಸರ ಚಿತ್ರಗಳನ್ನು ಮತ್ತು ಮಾಹಿತಿಯನ್ನು ದೂರ ದೂರದಲ್ಲಿ ಅಡಗಿಸಿಟ್ಟು ಅವುಗಳನ್ನು ಕಾಲಾನುಕ್ರಮದಲ್ಲಿ ಜೋಡಿಸುವಂತೆ ಸೂಚಿಸಿರಿ ಅಷ್ಟದಿಗ್ಗಜರ ಹೆಸರನ್ನು ಸಂಗ್ರಹಿಸಿ.<br>1.4 ವಿಜಯನಗರ ಕಾಲದಲ್ಲಿ ವ್ಯಾಪಾರ ಮಾಡುತ್ತಿದ್ದ ಮುತ್ತು ರತ್ನಗಳನ್ನು ಮಕ್ಕಳು ಅಣಕು ವ್ಯಾಪಾರ ಮಾಡುವಂತೆ ಸೂಚಿಸಿ.<br>**( ದಿನಗಳು -3)**<br>1.6 ಶಾಲೆಯಲ್ಲಿ ಶ್ರೀಕೃಷ್ಣದೇವರಾಯ ಸಿನಿಮಾವನ್ನು ಮಕ್ಕಳು ವೀಕ್ಷಿಸಲಿ. (ಯುದ್ಧದ ಸನ್ನಿವೇಶಗಳು )<br>1.8 ಕಲಿಕಾ ನಿಲ್ದಾಣ ರಚಿಸಿ ವಿದ್ಯಾರ್ಥಿಗಳಿಂದ ಪ್ರಮುಖ ರಾಜರ ಸಾಧನೆಗಳನ್ನು ಕುರಿತ ಮಾಹಿತಿಯನ್ನು ಬರೆದು ವಿಷಯ ಮಂಡನೆ |

| | | | |
|---|---|---|---|
| 2.ಬಹಮನಿ ಸುಲ್ತಾನರ ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪದ ಕೊಡುಗೆಗಳನ್ನು ವರ್ಣಿಸುತ್ತಾರೆ.<br>( 7ನೇ ತರಗತಿಯ ಕಲಿಕಾ ಫಲ-02) | 1. ಬಹಮನಿ ರಾಜ್ಯದ ಸ್ಥಾಪನೆ<br>2.ಮಹಮ್ಮದ್ ಗವಾನನ ಕೊಡುಗೆ<br>3. ಸಾಂಸ್ಕೃತಿಕ ಕೊಡುಗೆಗಳು<br> | 2.1 ಸ್ಥಳ ಭೇಟಿ (ಸ್ಥಳೀಯ ಮಸೀದಿ)<br>2.1 ಚಿತ್ರ ಸಂಗ್ರಹ<br>2.2 ಮಾಹಿತಿ ಸಂಗ್ರಹ<br>2.3 ಕಾಲಾನುಕ್ರಮ ಜೋಡಣೆ<br>2.4 ರಸಪ್ರಶ್ನೆ<br>2.5 ಕಿರುನಾಟಕ ಅಭಿನಯ<br>2.6 ಆತ್ಮ ಚರಿತ್ರೆ | 2.2.ಬಹಮನಿ ಅರಸರ ಕಾಲದ ಚಿತ್ರ ಮತ್ತು ಮಾಹಿತಿ ಸಂಗ್ರಹಿಸಿ. ಬಹಮನಿ ಮತ್ತು ವಿಜಯನಗರ ಕಾಲದ ವಾಸ್ತುಶಿಲ್ಪದ ಲಕ್ಷಣಗಳನ್ನು ಪಟ್ಟಿಮಾಡಿ ಮತ್ತು ವ್ಯತ್ಯಾಸ ಗಮನಿಸಿ.<br>2.7 ಹಸನ್ ಗಂಗೂ ಬಹುಮನ್ ಷಾ ನ ಆತ್ಮ ಚರಿತ್ರೆ ಓದಲು ತಿಳಿಸಿ.<br>**( ದಿನ -1)** |

| | | | |
|---|---|---|---|
| 3. ಧಾರ್ಮಿಕ ಸಾಮರಸ್ಯವನ್ನು ತರುವಲ್ಲಿ ಭಕ್ತಿಪಂಥದ ಕೊಡುಗೆಗಳು, ದಾಸರು ಮತ್ತು ಸಂತರ ಬೋಧನೆಗಳನ್ನು ವಿವರಿಸುತ್ತಾರೆ.<br>( 7ನೇ ತರಗತಿಯ ಕಲಿಕಾ ಫಲ-03) | **1.** ಆಚಾರ್ಯತ್ರಯರು<br><br><br><br>**2.** ಭಕ್ತಿಸಂತರು<br>**3.** ಸೂಫಿ ಸಂತರು<br> | 3.1 ಪಾತ್ರಾಭಿನಯ<br>3,2 ಕಿರುನಾಟಕ ಅಭಿನಯ<br>3.3 ಭಕ್ತಿಸಂತರ ಚಿತ್ರಪಟ ಸಂಗ್ರಹ<br>3.4 ಸೂಫಿ ಸಂತರ ಬೋಧನೆ, ಜೀವನ ಚರಿತ್ರೆ ಸಂಗ್ರಹ<br>3.5 ವಚನ ಗಾಯನ ಮತ್ತು ಸಂಗ್ರಹ<br>3,6 ಗುಂಪು ಚಟುವಟಿಕೆ<br>3,7 ರಸಪ್ರಶ್ನೆ<br>3.8 ನೃತ್ಯಗೀತೆ<br>3.9 ಚಲನಚಿತ್ರ ವೀಕ್ಷಣೆ<br>ವೆಬ್ ಲಿಂಕ್ :<br>https://youtu.be/B6wHMFAKe8k<br>3.10 ಅಣಕು ಸಂಸತ್ತು( ಜಗತ್ತಿನ ಮೊದಲ ಸಂಸತ್ತು)<br>3.11 ಕಲಿಕಾ ನಿಲ್ದಾಣ.<br>3.12 ಸಂತ ಶಿಶುನಾಳ ಶರೀಫರ ಚಲನಚಿತ್ರ ವೀಕ್ಷಣೆ | 3.1 ಮಗುವಿಗೆ ಆಚಾರ್ಯತ್ರಯರ ಪಾತ್ರಗಳನ್ನು ನೀಡಿ ಅಭಿನಯಿಸಲು ತಿಳಿಸಿ.<br>3.2 ಬಸವಣ್ಣನವರ ಪಾತ್ರಾಭಿನಯ ನಿರ್ವಹಣೆಗೆ ತಿಳಿಸಿ.<br>3.6 ತರಗತಿಗಳನ್ನು ಗುಂಪುಗಳನ್ನಾಗಿ ವಿಂಗಡಿಸಿ ವಿವಿಧ ಭಕ್ತಿ ಸಂತರ ಬಗ್ಗೆ ಮಾಹಿತಿ ಸಂಗ್ರಹಿಸಿ ತರಗತಿಯಲ್ಲಿ ಹಂಚಿಕೊಳ್ಳಲು ತಿಳಿಸಿ<br>3.7 ಶರಣರು, ಭಕ್ತಿ ಸಂತರು, ಸೂಫಿ ಸಂತರ ಜೀವನ ಮತ್ತು ಬೋಧನೆ ಕುರಿತು ರಸಪ್ರಶ್ನೆ ಆಯೋಜಿಸಿ.<br>3.10 ಅನುಭವ ಮಂಟಪದ ಅಣಕು ಪ್ರದರ್ಶನ ನಡೆಸಿ ವಿವಿಧ ಜಾತಿಯ ಶರಣರೆಲ್ಲ ಸೇರಿ ಜಾತಿ ವ್ಯವಸ್ಥೆಯನ್ನು ಹೋಗಲಾಡಿಸಲು ಪ್ರಯತ್ನಿಸಿದ್ದರ ಕುರಿತು ತಿಳಿಸಿ.<br>3.11 ಭಕ್ತಿ ಸಂತರ ಮಾಹಿತಿಯನ್ನು ವಿವಿಧ ಕಲಿಕಾ ನಿಲ್ದಾಣಗಳಲ್ಲಿ ಇಟ್ಟು ವಿದ್ಯಾರ್ಥಿಗಳು ಅಲ್ಲಿಗೆ ಭೇಟಿ ನೀಡಿ ಅವರ ಮಾಹಿತಿಯನ್ನು ಸಂಗ್ರಹಿಸಿ.<br>**(ದಿನಗಳು - 2)** |

| | | | |
|---|---|---|---|
| 4.ಜನರ ರಾಜಕೀಯ,ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಜೀವನದ ಮೇಲೆ ಸುಲ್ತಾನರು ಮತ್ತು ಮೊಘಲ್ ಆಳ್ವಿಕೆಯ ಪ್ರಭಾವವನ್ನು ಅರಿಯುವರು.<br>( 7ನೇ ತರಗತಿಯ ಕಲಿಕಾ ಫಲ-06) | 1. ದೆಹಲಿ ಸುಲ್ತಾನರು ಮತ್ತು ಮೊಘಲರ ಕಾಲದ ಸಾಂಸ್ಕೃತಿಕ ಕೊಡುಗೆಗಳು | 4.1 ಗುಂಪು ಚರ್ಚೆ<br>4.2 ಪಟ್ಟಿ ತಯಾರಿಕೆ (ಹಬ್ಬಗಳು, ವೃತ್ತಿಗಳು )<br>4.3 ಸ್ಮಾರಕಗಳ ಚಿತ್ರ ಸಂಗ್ರಹ<br>4.4 ಆತ್ಮಕಥನ<br>4.5 ಕಲಿಕಾ ನಿರ್ಮಾಣ<br>4.6 ಸಂಭಾಷಣೆ<br>4.7 ಗುಂಪು ಚಟುವಟಿಕೆ<br>4.8 ಅನ್ಯಭಾಷೆಯ ಪದಗಳ ಸಂಗ್ರಹ | 4.1 ತರಗತಿಯನ್ನು ಗುಂಪುಗಳಾಗಿ ವಿಂಗಡಿಸಿ ಪ್ರತಿ ಗುಂಪಿಗೆ ಒಂದೊಂದು ಸಾಂಸ್ಕೃತಿಕ ಕೊಡುಗೆಯ ಕಲಿಕಾಂಶದ ಬಗ್ಗೆ ಮಾಹಿತಿ ಸಂಗ್ರಹಿಸಿ ಚರ್ಚಿಸಲು ಅನುಕೂಲಿಸಿ.<br>4.3 ಸ್ಮಾರಕಗಳ ಚಿತ್ರ ಸಂಗ್ರಹಿಸಿ ಕಟ್ಟಡ ರಚನೆಯಲ್ಲಿನ ವ್ಯತ್ಯಾಸಗಳನ್ನು ಮಕ್ಕಳು ಅವಲೋಕಿಸಿ ಚರ್ಚಿಸುವಂತೆ ಮಾಡಿರಿ.<br>4.6 ದೆಹಲಿ ಸುಲ್ತಾನರು ಮತ್ತು ಮೊಘಲರ ಕಾಲದ ಸಾಂಸ್ಕೃತಿಕ ಕೊಡುಗೆಗಳ ಕುರಿತು ಸಂಭಾಷಣೆ ನಡೆಸಿ.<br>4.8 ಕಂದಾಯ ಇಲಾಖೆಗೆ ಭೇಟಿ ನೀಡಿ ಅಲ್ಲಿ ಬಳಸಲಾಗುವ ಅನ್ಯಭಾಷೆಯ ಪದಗಳನ್ನು ಸಂಗ್ರಹಿಸಲು ಪ್ರೇರೇಪಿಸಿ.(ಉದಾ: ಶಿರಸ್ತೇದಾರ್,ಪಹಣಿ,ಪಟ್ಟಾ, ಬಗರ್ ಹುಕುಂ ಇತ್ಯಾದಿ)<br>**(ದಿನಗಳು -2)** |
| 5.ಶಿವಾಜಿಯ ಜೀವನ ಮತ್ತು ಸಾಧನೆಯನ್ನು ಸಾರಾಂಶೀಕರಿಸುವರು.<br>(7ನೇ ತರಗತಿಯ ಕಲಿಕಾ ಫಲ-07) | 1. ಶಿವಾಜಿಯ ಆರಂಭಿಕ ಜೀವನ<br>2. ಸೈನಿಕ ಸಾಧನೆಗಳು<br>3. ಆಡಳಿತ ಸುಧಾರಣೆಗಳು | 5.1 ವಿಡಿಯೋ ಪ್ರದರ್ಶನ<br>5.2 ಕೋಟೆಗಳ ಚಿತ್ರ ಸಂಗ್ರಹ<br>5.3 ಚಿತ್ರ ಬಿಡಿಸುವುದು<br>5.4 ನಾಟಕ<br>5.5 ನಕ್ಷೆ ರಚನೆ | 5.1 ಶಿವಾಜಿಯು ಅಫಜಲ್ಖಾನನ ಹತ್ಯೆ ಮಾಡುವ ದೃಶ್ಯದ ವಿಡಿಯೋ ಪ್ರದರ್ಶನ<br>5.5 ಮರಾಠರ ಕಾಲದ ನಕ್ಷೆಯಲ್ಲಿ ಶಿವಾಜಿ ಗೆದ್ದ ಪ್ರದೇಶಗಳ ಗುರುತಿಸಿ<br>5.6 ಅಷ್ಟಪ್ರಧಾನರು ಮತ್ತು ಇಂದಿನ ಆಧುನಿಕ ಮಂತ್ರಿಮಂಡಲದ ಕಲ್ಪನೆ ಮೂಡಿಸಿ. |

| | | | |
|---|---|---|---|
| |  | 5.6 ಪಾತ್ರಾಭಿನಯ<br>5.7 ಅಣಕು ರಾಜಸಭೆ<br>5.8 ಕಥೆ ಹೇಳಿಸುವುದು<br>5.9 ಗೆರಿಲ್ಲಾ ಯುದ್ಧ ನೀತಿ ಬಗ್ಗೆ ಹೆಚ್ಚಿನ ಮಾಹಿತಿ | (ವಿದ್ಯಾರ್ಥಿಗಳಿಗೆ ಪಾತ್ರ ನೀಡಿ ಅಂದಿನ ಅಷ್ಟಪ್ರಧಾನರ ವಿವಿಧ ಹುದ್ದೆಗಳಂತೆ ನಟಿಸಲು ತಿಳಿಸಿ. ನಂತರ ಈಗಿನ ಆಧುನಿಕ ಮಂತ್ರಿದ ಹುದ್ದೆಗಳಂತೆ ನಟಿಸಲು ತಿಳಿಸಿ.)<br>5.8 ಅಡಗೂಲಜ್ಜಿ ಕಥೆ.<br>**(ದಿನಗಳು -2 )**<br>**5.9** ಶಿವಾಜಿ ಮಾಹಿತಿಯ ವೆಬ್ ಲಿಂಕ್<br>https://youtu.be/AhBy1SaCD-Y |
| 6. ಮೂಲಭೂತ ಹಕ್ಕು, ಕರ್ತವ್ಯ, ರಾಜನೀತಿ ನಿರ್ದೇಶಕ ತತ್ವಗಳು ಮತ್ತು ಅವುಗಳಿಂದ ಪೌರರಿಗೆ ಆಗುವ ಪ್ರಯೋಜನಗಳ ಬಗ್ಗೆ ಅರಿಯುವರು.<br>(7ನೇ ತರಗತಿಯ ಕಲಿಕಾ ಫಲ-17) | 1. ಮೂಲಭೂತ ಹಕ್ಕುಗಳನ್ನು ಅರಿತುಕೊಳ್ಳುವುದು<br>2. ಮೂಲಭೂತ ಕರ್ತವ್ಯಗಳನ್ನು ತಿಳಿದುಕೊಳ್ಳುವುದು<br>3. ರಾಜನೀತಿ ನಿರ್ದೇಶಕ ತತ್ವಗಳನ್ನು ತಿಳಿಯುವುದು | 6.1 ಕಲಿಕಾ ನಿಲ್ದಾಣ<br>6.2 ಚರ್ಚಾ ಗೋಷ್ಠಿ<br>6.3 ಗುಂಪು ಚರ್ಚೆ<br>6.4 ಅಣಕು ಪ್ರದರ್ಶನ<br>6.5 ಟ್ರೆಶರ್ ಹಂಟ್<br>6.6 ಹರಟೆ | 6.4 ಸಾರ್ವಜನಿಕ ಸ್ವತ್ತುಗಳ ರಕ್ಷಣೆ ಮತ್ತು ಸಾರ್ವಜನಿಕ ನಡವಳಿಕೆಯ ಕುರಿತು ಅಣಕು ಪ್ರದರ್ಶನ ನಡೆಸಿ.<br>(ಸಾರ್ವಜನಿಕ ಸ್ವತ್ತುಗಳ ಹಾಳುಮಾಡುವ, ವಿರೂಪಗೊಳಿಸುವ ಉದಾಹರಣೆಗಳನ್ನು ಮಕ್ಕಳಿಂದಲೇ ಅಭಿನಯಿಸುವಂತೆ ಹೇಳಿ ಜಾಗೃತಿ ಮೂಡಿಸುವುದು )<br>ಉದಾ: ಸಾರ್ವಜನಿಕ ಸ್ಥಳಗಳಲ್ಲಿ ಬರೆಯುವ ವಿಕೃತ ಪದಗಳು ಇತ್ಯಾದಿ<br>6.6 ಹರಟೆಯ ಮೂಲಕ ಹಕ್ಕು ಮತ್ತು ಕರ್ತವ್ಯಗಳ ನಿಜವಾದ ಅರ್ಥವನ್ನು ಮಕ್ಕಳೇ ಚರ್ಚಿಸುವಂತೆ ಅನುಕೂಲಿಸಿ.<br>**(ದಿನಗಳು -1)** |

| | | | |
|---|---|---|---|
| 7.ರಾಜ್ಯಗಳ ವಿಧಾನಸಭಾ ಕ್ಷೇತ್ರಗಳನ್ನು ಮತ್ತು ತನ್ನ ಮತಕ್ಷೇತ್ರವನ್ನು ಹಾಗೂ ಸ್ಥಳೀಯ ವಿಧಾನಸಭಾ ಸದಸ್ಯರ ಹೆಸರನ್ನು ಗುರುತಿಸುವರು<br>( 7ನೇ ತರಗತಿಯ ಕಲಿಕಾ ಫಲ-18) | 1. ವಿಧಾನಸಭೆ ಮತ್ತು ವಿಧಾನ ಪರಿಷತ್ ಪರಿಚಯ<br>2. ಸ್ಥಳೀಯ ಜನಪ್ರತಿನಿಧಿಗಳ ಪರಿಚಯ | 7.1 ರಸಪ್ರಶ್ನೆ.<br>7.2 ಕರ್ನಾಟಕದ ನಕ್ಷೆಯಲ್ಲಿ ಗುರುತಿಸುವುದು.<br>7.3 ಸಂದರ್ಶನ.<br>7.4 ಕೋಷ್ಟಕ ತಯಾರಿ. (ಮುಖ್ಯಮಂತ್ರಿಗಳು ಅಥವಾ ಯಾವ ಸದಸ್ಯರು ಯಾವ ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ )<br>7.5 ಸಾಧ್ಯವಾದಲ್ಲಿ ಹಾಲಿ/ಮಾಜಿ ಶಾಸಕರ ಸಂದರ್ಶನ. | 7.2 ಕರ್ನಾಟಕದ ನಕ್ಷೆಯಲ್ಲಿ ವಿಧಾನಸಭಾ ಕ್ಷೇತ್ರಗಳನ್ನು ಗುರುತಿಸಲು ತಿಳಿಸಿ. ಸ್ಥಳಿಯ ವಿಧಾನಸಭಾ ಕ್ಷೇತ್ರವನ್ನು ಗುರುತಿಸಿ<br>7.5 ಸ್ಥಳೀಯ ಶಾಸಕರು ಲಭ್ಯವಾದಲ್ಲಿ ಸಂದರ್ಶನ ಮಾಡಿಸಿ.<br>**(ದಿನಗಳು -2)** |
| 8.ರಕ್ಷಣಾ ಸೇವೆಗಳ ಪ್ರಾಮುಖ್ಯತೆ ಮತ್ತು ಪಾತ್ರವನ್ನು ವರ್ಣಿಸುತ್ತಾರೆ.<br>( 7ನೇ ತರಗತಿಯ ಕಲಿಕಾ ಫಲ-19) | 1. ರಕ್ಷಣಾ ಪಡೆಗಳ ಪರಿಚಯ<br>2. ರಕ್ಷಣಾ ಪಡೆಗಳ ಮಹತ್ವ<br>3. ವಿವಿಧ ಸೇನಾಪಡೆಗಳ ವಿಧಗಳು | 8.1 ಕೇಡರ್ ಪಟ್ಟಿ ತಯಾರಿಕೆ.<br>8.2 ಮಾಹಿತಿ ಸಂಗ್ರಹ.<br>8.3 ಮಿಲಿಟರಿ ಸಂಬಂಧೀ ಚಿತ್ರ ಸಂಗ್ರಹ.<br>8.4 ಸ್ಥಳೀಯ ಸೈನಿಕರ ಸಂದರ್ಶನ.<br>8.5 ವಿಡಿಯೋ ಪ್ರದರ್ಶನ<br>ವೆಬ್ ಲಿಂಕ್ :<br>https://youtu.be/KxsdWBcaKvk | 8.2 ಭಾರತದಲ್ಲಿ ಇರುವ ರಕ್ಷಣಾ ಪಡೆಗಳ ಪಟ್ಟಿ ತಯಾರಿಸಿಕೊಂಡು ತರಗತಿಯಲ್ಲಿ ಪ್ರದರ್ಶಿಸಲು ತಿಳಿಸಿ.<br>8.1 ರಕ್ಷಣಾ ಪಡೆಗಳಲ್ಲಿರುವ ವಿವಿಧ ಹುದ್ದೆಗಳ ಮಾಹಿತಿಯನ್ನು ಸಂಗ್ರಹಿಸಲು ತಿಳಿಸಿ.<br>8.3 ಪತ್ರಿಕೆಯಲ್ಲಿ ಆಗಾಗ ಬರುವ ರಕ್ಷಣಾ ಪಡೆಗಳ ಕುರಿತಾದ ಚಿತ್ರ ಮತ್ತು ಮಾಹಿತಿಗಳನ್ನು ಸಂಗ್ರಹಿಸಿಟ್ಟುಕೊಳ್ಳಲು ತಿಳಿಸಿ.<br>8.4 ಸ್ಥಳೀಯ ನಿವೃತ್ತ ಸೈನಿಕರ ಸಂದರ್ಶನ ಮಾಡಿಸಿ.<br>8.5 ಗಣರಾಜ್ಯೋತ್ಸವದ ಪರೇಡ್ ವೀಕ್ಷಣೆ. |

| | | | |
|---|---|---|---|
| | | | **(ದಿನಗಳು -2)** |
| 9. ಬೌದ್ಧ ಧರ್ಮ ಮತ್ತು ಜೈನ ಧರ್ಮದ ಬೋಧನೆಗಳು ಮತ್ತು ಜೀವನ ಶೈಲಿಯ ವ್ಯತ್ಯಾಸವನ್ನು ವಿವರಿಸುವರು.<br>(8ನೇ ತರಗತಿಯ ಕಲಿಕಾ ಫಲ-06) | 1. ಬೌದ್ಧ ಧರ್ಮದ ಕುರಿತಾಗಿ ತಿಳಿದುಕೊಳ್ಳುವುದು<br>ವೆಬ್ ಲಿಂಕ್ :<br>https://youtu.be/FwTVApxiGGg<br>2. ಜೈನ ಧರ್ಮದ ಕುರಿತಾದ ಹೆಚ್ಚಿನ ಮಾಹಿತಿ | 9.1 ಪಾತ್ರಾಭಿನಯ<br>9.2 ಆತ್ಮಕಥನ<br>9.3 ನೃತ್ಯಗೀತೆ<br>9.4 ಗೀತನಾಟಕ<br>9.5 ಸಂಭಾಷಣೆ<br>9.6 ಕವಿತೆ ರಚನೆ<br>9.7 ನಾಟಕ | 9.4 ಗೀತ ನಾಟಕ ಕಿಸಾಗೋತಮಿ ಕಲಿಸಿರಿ.<br>9.7 ಅಂಗುಲಿಮಾಲ, ಬುಧ್ಧನ ನೆರಳು, ಮಹಾನಿರ್ಗಮನಗಳಂತಹ ನಾಟಕಗಳನ್ನು ಪ್ರದರ್ಶಿಸಿಲು ಅನುಕೂಲಿಸಿರಿ.<br>**(ದಿನಗಳು -2)** |
| 10. ಚೋಳರ ಕಾಲದ ಸ್ವ ಸರ್ಕಾರ ಪದ್ಧತಿ ಮತ್ತು ಪ್ರಸಕ್ತ ಸ್ಥಳೀಯ ಸರ್ಕಾರ ಪದ್ಧತಿಗಳನ್ನು ಹೋಲಿಸುವರು.<br>( 8ನೇ ತರಗತಿಯ ಕಲಿಕಾ ಫಲ-13) | 1. ಚೋಳರ ಕಾಲದ ಗ್ರಾಮಾಡಳಿತ<br>2. ಸ್ಥಳೀಯ ಸರ್ಕಾರ<br> | 10.1 ಭೇಟಿ/ಸಂದರ್ಶನ<br>10.2 ಅಣಕು ಗ್ರಾಮಸಭೆ<br>10.3 ಡಮ್ ಶರಡ್ಸ್<br>10.4 ಚರ್ಚಾ ಗೋಷ್ಠಿ<br>10.5 ಉತ್ತರ ಮೇರೂರು ಶಾಸನ ಅನಾವರಣ. | 10.1 ಸ್ಥಳೀಯ ಗ್ರಾಮಪಂಚಾಯತಿಗೆ ಭೇಟಿ ಮಾಡಿಸಿ.<br>10.3 ವಿದ್ಯಾರ್ಥಿಗಳು ಡಮ್ ಶರಡ್ಸ್ ಚಟುವಟಿಕೆಯಲ್ಲಿ ಗ್ರಾಮಪಂಚಾಯತಿಯ ಅಧ್ಯಕ್ಷ ಉಪಾಧ್ಯಕ್ಷರಾಗಿ ಅವರ ಕಾರ್ಯವನ್ನು ವಿವರಿಸಲು ಅವಕಾಶ ಕಲ್ಪಿಸಿ.<br>10.4 “ಗ್ರಾಮಗಳ ಅಭಿವೃದ್ಧಿ ದೇಶದ ನೈಜ ಅಭಿವೃದ್ಧಿ” ಈ ವಿಷಯದ ಕುರಿತು ಚರ್ಚಿಸಲು ಅನುಕೂಲಿಸಿ.<br>**(ದಿನಗಳು -2)** |
| 11.ಭೂಮಿಯ ಆಕಾರವನ್ನು ವಿವರಿಸುತ್ತಾರೆ. ಭೂಮಿಯ | 1. ಭೂಮ್ಯಾಕಾರ | 11.1 ಅವಲೋಕನ.<br>11.2 ಮಾದರಿ ತಯಾರಿಕೆ. | 11.3 ಲಂಡನ್ನಿನ ಬೆಡ್ ಫೋರ್ಡ್ ಸೇತುವೆಯಿಂದ 5 ಕಿ.ಮೀ ದೂರದಲ್ಲಿ ಸಮತಟ್ಟಾದ ನೀರಿನ ಮೇಲೆ 5 ಮೀ ಎತ್ತರದ 3 |

| | | | |
|---|---|---|---|
| ಸುತ್ತಳತೆ, ಸಮಭಾಜಕ ವೃತ್ತ, ಮತ್ತು ಧೃವೀಯ ವ್ಯಾಸವನ್ನು ತೋರಿಸುವ ರೇಖಾಚಿತ್ರ ರಚಿಸುತ್ತಾರೆ.<br><br>ಅಕ್ಷಾಂಶ ಮತ್ತು ರೇಖಾಂಶಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸುತ್ತಾರೆ.<br><br>ಗ್ಲೋಬ್ ಮತ್ತು ನಕಾಶೆಯ ಮೇಲೆ ಅಕ್ಷಾಂಶ ಮತ್ತು ರೇಖಾಂಶಗಳನ್ನು ಗುರುತಿಸುತ್ತಾರೆ.<br>( 8ನೇ ತರಗತಿಯ ಕಲಿಕಾ ಫಲ-17) | <br><br>2. ಅಕ್ಷಾಂಶ ಮತ್ತು ರೇಖಾಂಶಗಳು | 11.3 ಪ್ರಾಯೋಗಿಕ ಚಟುವಟಿಕೆ. | ಕಂಬಗಳನ್ನು ಸಮಾನಾಂತರದಲ್ಲಿ ಇರಿಸಲಾಯಿತು. ಸೇತುವೆಯ ಮೇಲಿನಿಂದ ದೂರದರ್ಶಕದಲ್ಲಿ ಗಮನಿಸಿದಾಗ ಮಧ್ಯಕಂಬವು ಎತ್ತರವಾಗಿರುವಂತೆ ಗೋಚರಿಸಿತು. 1953ರಲ್ಲಿ ನಡೆದ ಈ ಪ್ರಯೋಗದಿಂದ ಭೂಮಿಯ ಆಕಾರದ ಕುರಿತು ಖಚಿತ ಸಾಕ್ಷ್ಯ ಒದಗಿಸಲಾಯಿತು. (ವಿವರಣೆಯಂತೆ ಈ ಕೆಳಗೆ ನೀಡಿರುವ ಚಟುವಟಿಕೆ ನಡೆಸಿ.)<br>ಭೂಗೋಳ ಸಂಗಾತಿ- ಸಂಪುಟ -01<br>11.3 ಮೈದಾನದಲ್ಲಿರುವ ವಿದ್ಯುತ್ ಕಂಬಗಳ ಸಾಲನ್ನು ಎತ್ತರ ಪ್ರದೇಶದಿಂದ ವೀಕ್ಷಿಸುವುದು ವೀಕ್ಷಿಸಿದಾಗ ಮಧ್ಯದ ಕಂಬ ಎತ್ತರವಾಗಿರುವುದನ್ನು ಕಂಡುಕೊಳ್ಳುವುದು.<br>(ಸಾಂದರ್ಭಿಕ ಅವಲೋಕನ ಗುರುಚೇತನ ವೃತ್ತಿಪರ ಅಭಿವೃದ್ಧಿ ಸಾಹಿತ್ಯವನ್ನು ಓದಿರಿ.)<br>**(ದಿನಗಳು -3)** |
| 12.ಹವಾಮಾನ ಮತ್ತು ವಾಯುಗುಣದ ನಡುವಿನ ವ್ಯತ್ಯಾಸವನ್ನು ತಿಳಿಯುವರು. | 1. ಹವಾಮಾನ ಮತ್ತು ವಾಯುಗುಣ<br><br>2. ವಾಯುಗುಣದ ವಲಯಗಳು | 12.1 ಸಮೀಕ್ಷೆ<br>12.2 ದೂರದರ್ಶನದಲ್ಲಿ ಮತ್ತು ಆಕಾಶವಾಣಿಯ ಹವಾಮಾನ | 12.2 ಒಂದು ವಾರದ ವಾತಾವರಣದ ದೈನಂದಿನ ಬದಲಾವಣೆಯನ್ನು ದಾಖಲಿಸಿ ನಕ್ಷೆ ತಯಾರಿಸಿ.<br>12.3 ಪಂಚವಲಯಗಳನ್ನು ಗುರುತಿಸಿ. |

| | | | |
|---|---|---|---|
| (8ನೇ ತರಗತಿಯ ಕಲಿಕಾ ಫಲ-19) | | ವರದಿಯನ್ನು ಆಲಿಸುವುದು ಮತ್ತು ದಾಖಲಿಸುವುದು.<br>12.3 ನಕಾಶೆಯಲ್ಲಿ ಗುರುತಿಸುವುದು<br>12.4 ಹರಟೆ. | 12.4 ಒಂದು ವಾರದ ವಾತಾವರಣದ ದೈನಂದಿನ ಬದಲಾವಣೆಯನ್ನು ದಾಖಲಿಸಿ. ಅದರಲ್ಲಿನ ವ್ಯತ್ಯಾಸಗಳನ್ನು ಕುರಿತು ಮಕ್ಕಳೇ ಹರಟೆ ನಡೆಸಲು ಅನುಕೂಲಿಸುವುದು.<br>**(ದಿನಗಳು -2)** |
| 13. ಭೂ ಸಂರಕ್ಷಣೆ ಕುರಿತ ವಿವಿಧ ಪರಿಸರ ಯೋಜನೆ ಕಾರ್ಯಕ್ರಮಗಳ ಅರಿವನ್ನು ಮೂಡಿಸುವುದು.<br>( 8ನೇ ತರಗತಿಯ ಕಲಿಕಾ ಫಲ-24) | 1. ಶಾಲಾ ಪರಿಸರದ ಅರಿವು | 13.1 ಶಾಲಾ ಸುತ್ತಲಿನ ಪರಿಸರ ಅವಲೋಕನ.<br>13.2 ಸುತ್ತಲ ಜೀವ ವೈವಿದ್ಯ ಪಟ್ಟಿ ತಯಾರಿ.<br>13.3 ಪರಿಸರ ಸಮೀಕ್ಷೆ.<br>13.4 ಪಾರಿಸಾರಿಕ ವರ್ಗೀಕರಣ<br>13.5 ಯೋಜನೆ ತಯಾರಿಕೆ.<br>13.6 ಸ್ಥಳಭೇಟಿ.<br>13.7 ಕಿರುಚಿತ್ರ ವೀಕ್ಷಣೆ.<br>13.8 ಸಂದರ್ಶನ.<br>13.9 ಮಣ್ಣು ಪರೀಕ್ಷಣಾ ವಿಧಾನ.<br>ವೆಬ್ ಲಿಂಕ್ :<br>https://youtu.be/O19NnSR6kok<br>13.10 ಅವಲೋಕನ.<br>13.11 ನೀರಿನ ಸಾಕ್ಷರತೆ ಚಾರ್ಟ್ | 13.3 ನಮ್ಮ ಸುತ್ತಲಿನ ಪರಿಸರವನ್ನು ವೀಕ್ಷಿಸಲು ತಿಳಿಸಿ. ಮಕ್ಕಳೇ ಜೀವವೈವಿಧ್ಯತೆಯನ್ನು ಗುರುತಿಸಲಿ.<br>13.4 ಮಣ್ಣಿನ ವಿಧಗಳು ಹಾಗೂ ಸಸ್ಯವರ್ಗದ ವಿಧಗಳನ್ನು ಮಕ್ಕಳೇ ಗಮನಿಸಿ ಗುರುತಿಸಲು ಪ್ರೇರೇಪಿಸಿ.<br>13.4 ಕಸವನ್ನು ಹಸಿಕಸ ಮತ್ತು ಒಣಕಸಗಳಾಗಿ ವಿಂಗಡಿಸಿ ವಿಲೇವಾರಿ ಮಾಡುವಂತೆ ಪ್ರೇರೇಪಿಸಿ.<br>13.5 ನೀರಿನ ಬಳಕೆಯ ಯೋಜನೆ ತಯಾರಿಸಲು ಅನುಕೂಲಿಸಿ.<br>13.9 ಸರಳ ಮಣ್ಣು ಪರೀಕ್ಷಣಾ ವಿಧಾನದ ಯೂಟ್ಯೂಬ್ ಕ್ಲಿಪಿಂಗ್ ವೀಕ್ಷಿಸಿ.<br>13.10 ಶಾಲೆ ಅಥವಾ ಮನೆಯಲ್ಲಿ ವಿಂಗಡಿಸಲಾದ ಹಸಿ ಮತ್ತು ಒಣ ಕಸಗಳ ಶೇಕಡಾ ಪ್ರಮಾಣಗಳನ್ನು ಕಂಡುಕೊಳ್ಳುವುದು.<br>13.11 ದಿನ ನಿತ್ಯ ಬಳಸುವ ನೀರನ್ನು ಲೆಕ್ಕ ಹಾಕಿ |

| | | | |
|---|---|---|---|
| | | ಬರೆಸಿ ಹಾಕುವುದು.<br>13.12 ಸುತ್ತಮುತ್ತಲಿನ ಪ್ರದೇಶದಲ್ಲಿ ಒಂದು ಸುತ್ತು ಹಾಕುವುದು (ಭಾರತದಲ್ಲಿ ಒಂದು ಸುತ್ತು ಹಾಕಿದರೆ 600 ಜೀವಿ ಪ್ರಭೇದಗಳು ಕಾಣಿಸುತ್ತವೆ, ಇತರ ದೇಶಗಳಲ್ಲಿ ಈ ಸಂಖ್ಯೆ ಬಹಳ ಕಡಿಮೆ ಇದೆ) | ಎಷ್ಟು ಕಡಿಮೆ ಬಳಸಬಹುದು ಎಂಬುದನ್ನು ಯೋಚಿಸಿ ಬಳಕೆ ಕೋಷ್ಟಕ ರಚಿಸಿ. ಈ ಮೂಲಕ ನೀರಿನ ಕಡಿಮೆ ಬಳಕೆಯನ್ನು ಧೃಢೀಕರಿಸುವುದು.<br><br>**(ದಿನಗಳು -3)** |
| 14.ಆರ್ಥಿಕ ಚಟುವಟಿಕೆಗಳ ಬಗ್ಗೆ ಅರಿವು ಮೂಡಿಸಿಕೊಳ್ಳುವರು. | 1. ಮನೆಯ ಹಣಕಾಸಿನ ನಿರ್ವಹಣೆ | 14.1 ಮನೆಯ ಆಯವ್ಯಯ ಪಟ್ಟಿ ತಯಾರಿಕೆ<br>14.2 ಅಡಿಗೆ ಮನೆಯ ಆಯವ್ಯಯ ಪಟ್ಟಿ ತಯಾರಿಕೆ<br>14.3 ಹಣಕಾಸು ರಹಿತ ಸರಕು ಸೇವೆಗಳ ಆಯವ್ಯಯ<br>14.4 ದಿನಚರಿ ಬರೆಯುವುದು<br>14.5 ದಾಖಲೀಕರಣ | 14.1 ಮನೆಯ ವಿವಿಧ ಖರ್ಚು ವೆಚ್ಚಗಳ ವಿವರ ಸಂಗ್ರಹಿಸಿ ಆಯವ್ಯಯ ಪಟ್ಟಿ ತಯಾರಿಸಿ.<br>14.4 ವಿದ್ಯಾರ್ಥಿಗಳಿಗೆ ತಮ್ಮ ದಿನ ನಿತ್ಯದ ಖರ್ಚುವೆಚ್ಚಗಳ ದಿನಚರಿ ಬರೆಯಲು ಪ್ರೇರೇಪಿಸುವುದು.<br>14.5 ಊರಿನ ವಿವಿಧ ಕೆಲಸಗಳ ಮತ್ತು ಕೆಲಸಗಾರರ ವೃತ್ತಿಗಳ ದಾಖಲೀಕರಣ ಮಾಡಿಸಿ.<br>**(ದಿನಗಳು -2)** |
| 15. ವ್ಯವಹಾರ ಸಂಘಟನೆಯ ಕುರಿತು ಮತ್ತು ಸ್ಥಳೀಯ ಉದ್ದಿಮೆಗಳ ವರ್ಗೀಕರಣವನ್ನು ತಿಳಿದುಕೊಳ್ಳುವರು. | 1. ವ್ಯವಹಾರ ಸಂಘಟನೆಗಳು | 15.1 ಸಂದರ್ಶನ<br>15.2 ಸಮೀಕ್ಷೆ<br>15.3 ಬೀದಿಯಲ್ಲೊಂದು ಸುತ್ತು<br>15.4 ದಿನಪತ್ರಿಕೆಗಳ ಮಾಹಿತಿ ಸಂಗ್ರಹಣೆ | 15.1 ಸ್ಥಳೀಯ ಉದ್ಯಮಿದಾರರ ಮತ್ತು ಉದ್ಯಮಗಳನ್ನು ಸಂದರ್ಶಿಸಲು ಅನುಕೂಲಿಸಿ..<br>15.2 ವಸ್ತುಗಳ ದರಪಟ್ಟಿಯನ್ನು ವೀಕ್ಷಿಸಿ ಹಾಗೂ ಬೆಲೆಗಳ ಸಮೀಕ್ಷೆ ನಡೆಸಲು ಅನುಕೂಲಿಸಿ.<br>**(ದಿನಗಳು -1)** |